ನಡೆದಿರಬಹುದೆಂದು ಬರೆಯೋಣ ಅನ್ನಿಸುತ್ತಿದೆ. ನೀವು ಪೊಲೀಸ್ ದೃಷ್ಟಿಯಿಂದ ನೋಡಿ ಕೊಲೆಗಾರನಿಗೆ ಕಾನೂನಿನ ಪ್ರಕಾರ ತಪ್ಪಿಸಿಕೊಳ್ಳುವ ಪ್ಲಾನ್ ಹೇಳಿ. ಅಲ್ಲಿಗೆ ನಮ್ಮ ಕತೆ ಮುಗಿಯುತ್ತದೆ. ಹಾಂ, ಇದೇನಾದರೂ ಸಿನಿಮಾ ಆದರೆ ಕತೆಗೆ ನಿಮ್ಮ ಸಹಾಯ, ಸಹಕಾರದ ಕ್ರೆಡಿಟ್ ನೀಡುತ್ತೇನೆ" ಎಂದ. ನಾಗರಾಜಯ್ಯ ತಲೆ ಆಡಿಸಿದ.

"ಕೊಲೆಗಾರ ಆನಂದರಾಮ್ ಮನೆಗೆ ಬಂದಿದ್ದು ಆರು ಪಿಜ್ಜಾಗಳು. ಮೊದಲನೆಯದು ಕೊಲೆಗಾರ ಆರ್ಡರ್ ಮಾಡಿ ಡೆಲಿವರಿ ಬಾಯ್ ವೇಷದಲ್ಲಿ ಬರುತ್ತದೆ. ಆನಂದರಾಮ್ ತಾನು ಆರ್ಡರ್ ಮಾಡಿಲ್ಲ ಅಂತಾ ಅವನನ್ನು ಬೈದು ಕಳುಹಿಸಿಕೊಡಲು ಅನುವಾದಾಗ ಒಳಗೆ ನುಗ್ಗಿ ಅವನ ಕುತ್ತಿಗೆ ಹಿಚುಕಿ ಸಾಯಿಸಿ ಪಿಜ್ಜಾ ವಾಪಸ್ ತೆಗೆದುಕೊಂಡು ಹೋಗುತ್ತಾನೆ. ಹೋಗುವ ಮೊದಲು ತಾನು ಬಂದು ಹೋಗಿದ್ದರ ಬಗ್ಗೆ ಸೆಕ್ಯುರಿಟಿಗೆ ಕನ್‌ಫ್ಯೂಸ್ ಆಗಲಿ ಅಂತಾ ಐದು ಬೇರೆಬೇರೆ ಪಿಜ್ಜಾಗಳಿಗೆ ಆರ್ಡರ್ ಮಾಡಿ ಆನಂದರಾಮ್‌ನ ಮೊಬೈಲ್ ತೆಗೆದುಕೊಂಡು ಹೋಗುತ್ತಾನೆ. ಡೆಲಿವರಿ ತಂದವರು ಫೋನ್ ಮಾಡಿದಾಗ ಅವರನ್ನು ಬೈದು ಓಡಿಸುತ್ತಾನೆ. ಹೀಗಾಗಿ ಅವನು ಸಲೀಸಾಗಿ ತಪ್ಪಿಸಿಕೊಳ್ಳುತ್ತಾನೆ. ಏನಂತಿರಾ?''

"ಎಲ್ಲ ಕೊಲೆಗಳಲ್ಲಿ ಇರುವಂತೆ ಇಲ್ಲೂ ಕೊಲೆಗಾರ ಸಣ್ಣ ತಪ್ಪು ಮಾಡಿದ್ದಾನೆ" ಎಂದು ನಾಗರಾಜಯ್ಯ ಗಂಭೀರವಾಗಿ ನುಡಿದ.

"ಏನದು?"

''ಆ ಆರು ಪಿಜ್ಜಾಗಳ ವಿಚಾರ... ಇಲ್ಲಿಯೇ ಪೊಲೀಸರು ತಪ್ಪಿದ್ದು... ಐದು ಪಿಜ್ಜಾ ಆರ್ಡರ್ ಮಾಡಿದ್ದು ಆನಂದರಾಮ್‌ನ ಮೊಬೈಲ್‌ನಿಂದ. ಹಾಗಾಗಿ ಆರನೇ ಪಿಜ್ಜಾ ಅಥವಾ ಇವೆಲ್ಲದರ ಮೊದಲು ಇನ್ನೊಂದು ಪಿಜ್ಜಾ ಬಂದಿರಬಹುದೆಂಬ ಐಡಿಯಾ ಕೂಡಾ ಇರಲಿಲ್ಲ. ನೀವೇ ಹೇಳಿದಂತೆ ಕೊಲೆಗಾರ ಡೆಲಿವರಿ ಬಾಯ್ ಥರ ಬಂದು ಮನೆಯೊಳಗೇ ನುಗ್ಗಿ ಆನಂದರಾಮ್‌ನ ಕೊಲೆ ಮಾಡಿ ಅವನ ಮೊಬೈಲ್‌ನಿಂದ ಮತ್ತೆ ಐದು ಕಡೆ ಆರ್ಡರ್ ಮಾಡಿ, ಅವರು ಬಂದಾಗ ಗಲಾಟೆ ಮಾಡಿ, ಸೆಕ್ಯುರಿಟಿಯನ್ನು ತರಾಟೆಗೆ ತೆಗೆದುಕೊಂಡು ನಂತರ ಡೆಲಿವರಿ ತೆಗೆದುಕೊಂಡು ಕಳುಹಿಸಿದ್ದಾನೆ. ಕಡೆಯ ಪಿಜ್ಜಾದವನು ಹೋಗುವಾಗ ಅವನೊಂದಿಗೆ ತಾನೂ ಹೋಗಿದ್ದಾನೆ. ಸೆಕ್ಯುರಿಟಿಯವನಿಗೆ ಗಲಾಟೆಯಲ್ಲಿ ಎಷ್ಟು ಜನ ಬಂದರು ಹೋದರು ಎನ್ನುವ ಲೆಕ್ಕ ಇಡಲು ಆಗದೆ ಕನ್‌ಫ್ಯೂಸ್ ಆಗಿ ಪೊಲೀಸರಿಗೆ ತಪ್ಪು ಮಾಹಿತಿ ನೀಡಿದ್ದಾನೆ. ಮೊದಲ ಪಿಜ್ಜಾವನ್ನು ಕೊಲೆಗಾರ ತನ್ನೊಂದಿಗೇ ತೆಗೆದುಕೊಂಡು ಹೋದುದರಿಂದ ಪೊಲೀಸರಿಗೆ ಅದರ ಬಗ್ಗೆ ಅನುಮಾನ ಬರಲಿಲ್ಲ."

"ಅದೆಲ್ಲ ಸರಿ, ಆ ಸಣ್ಣ ತಪ್ಪೇನು? ಅದರಿಂದಲೇ ಕತೆ ಮತ್ತೆ ತಿರುವು ಪಡೆಯಬಹುದು'' ಎಂದ ಕಾಮತನಿಗೆ ನಶೆ ಏರಿತ್ತು, ಧ್ವನಿ ಸಣ್ಣದಾಗಿ ತೊದಲತೊಡಗಿತ್ತು.

"ಇದನ್ನು ಕತೆ ಎಂದುಕೊಂಡಿರಾ ಸಾರ್, ಇದು ನಿಜವಾದ ಕೊಲೆಯ ಬಗ್ಗೆ ನಡೆದ ತನಿಖೆ. ಎಲ್ಲಿಂದ ಯಾವ ಕೋನದಿಂದ ನೋಡಿದರೂ ನಮ್ಮ ತನಿಖೆ ಆ ಪಿಜ್ಜಾ ತನಕ ಬಂದು ನಿಲ್ಲುತ್ತಿತ್ತು; ಮುಂದಿನದು ಕೇವಲ ಕೊಲೆಗಾರನಿಗೆ ಮಾತ್ರ ಗೊತ್ತಿತ್ತು. ಅದು ಹೇಗೆ ಅಂತಾ ಇವತ್ತು ನಿಮ್ಮ ಬಾಯಿಯಲ್ಲಿಯೇ ತಿಳಿಯಿತು..."

ಧಡಕ್ಕನೆ ಎದ್ದು ನಿಂತ ಕಾಮತ್. ಏರಿದ್ದ ನಶೆ ಇಳಿಯತೊಡಗಿತು. ಮೈಯೆಲ್ಲಾ ಬೆವರಿ ಒದ್ದೆ ಆಯಿತು. ಇಷ್ಟು ಹೊತ್ತು ನಡೆದಿದ್ದೆಲ್ಲಾ ನಾಟಕ ಎಂಬುದು ಅವನಿಗೆ ಗೊತ್ತಾಯಿತು! ನನ್ನನ್ನು ಸಿಕ್ಕಿ ಹಾಕಿಸಲು ಈ ಮುದುಕ ಇನ್‌ಸ್ಪೆಕ್ಟರ್ ನಾಟಕ ಆಡಿದ ಎಂಬ ಅರಿವು ಆಯಿತು.